ಅ) ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು.

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮುಂತ್ರಿಗಳು) :

ಅ) ಮತ್ತು ಆ) ಈ ಪ್ರಸ್ತಾವನೆಯು ಇನ್ನೂ ಪರಿಶೀಲನೆಯಲ್ಲಿದೆ.

ಸಾರ್ವಜನಿಕ ಕುಂದುಕೊರತೆಗಳ ಪರಿಹಾರ

753-ಶ್ರೀ ಎನ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ಕುಂದು ಕೊರತೆಗಳನ್ನು ಪರಿಹರಿಸಲು ಪ್ರತಿ ತಿಂಗಳು ಜನರೊಂದಿಗೆ ನೇರ ಅಹವಾಲುಗಳನ್ನು ಹೇಳಲು ಸರ್ಕಾರಿ ಇಲಾಖೆಗಳು ಕಡ್ಡಾಯವಾಗಿ ಜನ ಸಂಪರ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದೆ?

ಆ) ಪ್ರತಿಯೊಂದು ಇಲಾಖೆಯ ಆಡಳಿತಾತ್ಮಕ ವ್ಯವಸ್ಥೆ ಜನತೆಗೆ ಒಳ್ಳೆಯ ಸೇವೆ ಸಲ್ಲಿಸುವಂತೆ ಜನತೆಯೊಡನೆ ನೇರ ಸಂಪರ್ಕ ಬರುವ ಸರ್ಕಾರಿ ಇಲಾಖೆಗಳಿಗೆ ಕಡ್ಡಾಯವಾಗಿ ಸಾರ್ವಜನಿಕ ಸಲಹಾ ಸಮಿತಿಯನ್ನು ರಚಿಸುವಂತೆ ಆಜ್ಞಾಪಿಸಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ಜನಸಂಪರ್ಕ ಸಭೆ ನಡೆಸಲು ಸೂಚನೆ ನೀಡಲಾಗಿದೆ.

ಆ) ಪರಿಶೀಲಿಸಲಾಗುವುದು.

ಬನ್ನಿ ಪೇಟೆ ಕ್ಷೇತ್ರದಲ್ಲಿ ಹೊಸದಾಗಿ ಪೋಲೀಸ್‌ಠಾಣೆ

1015 - ಶ್ರೀ ವಿ. ಸೋಮಣ್ಣ (ಬನ್ನಿಪೇಟೆ) : ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬನ್ನಿಪೇಟೆ ಕ್ಷೇತ್ರದಲ್ಲಿ 1994-95 ರಲ್ಲಿ ಎಷ್ಟು ಪೋಲೀಸ್‌ಠಾಣೆಗಳನ್ನು ತೆರೆಯಲಾಗಿದೆ?

ಆ) 1995-96ನೇ ಸಾಲಿನಲ್ಲಿ ಎಷ್ಟು ಹೊಸ ಪೋಲೀಸ್‌ಠಾಣೆಗಳನ್ನು ತೆರೆಯಲಾಗುವುದು?

ಶ್ರೀ ಪಿ.ಜಿ. ಆರ್.ಸಿಂಧ್ಯ (ಗೃಹ ಸಚಿವರು) :

ಅ) ಎರಡು

ಆ) 1995-96ನೇ ಸಾಲಿನಲ್ಲಿ ರಾಜ್ಯದಲ್ಲಿ ಒಟ್ಟು 20 ಹೊಸ ಪೋಲೀಸ್ ಠಾಣೆಗಳನ್ನು ತೆರೆಯಲು ಉದ್ದೇಶಿಸಿದೆ. ಅವುಗಳನ್ನು ಅದ್ಯತೆ, ಅಗತ್ಯತೆ ಅನುಸರಿಸಿ ಮಂಜೂರು ಮಾಡಲಾಗುವುದು.

ಮೈಸೂರು ರಸ್ತೆಯಲ್ಲಿ ವಾಹನ ಅಪಘಾತಗಳನ್ನು ತಡೆಯಲು ಕೈಗೊಂಡ ಕ್ರಮ

1019 - ಶ್ರೀ ವಿ. ಸೋಮಣ್ಣ .(ಬಿನ್ನಿಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ಮೈಸೂರು ರಸ್ತೆಯಲ್ಲಿ ವಾಹನ ಅಪಘಾತಗಳು ಜಾಸ್ತಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಹಾಗೂ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು):